5. ಹೇಳಿಕೆ

ವಿಷಯ ; ಜೆನೆರಿಕ್ ಔಷಧಿ ಬಗ್ಗೆ

ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡಿತ ಅದೇ ವಿಷಯವನ್ನು ಹೇಳುತ್ತೇನೆ. ಆಯಿತು, fine ಮಾನ್ಯ ಸಿದ್ದರಾಮಯ್ಯನವರಂಥ ಹಿರಿಯರು ಇರುವಾಗ ಈ ಸದನದ ವ್ಯವಸ್ಥೆಗಳು ಏನೆಂಬುದನ್ನು ಅವರ ಇಷ್ಟು ವರ್ಷಗಳ ಅನುಭವ ಮತ್ತು ಆಲ್ಲೂ ಕುಳಿತ ಸಂದರ್ಭದಲ್ಲಿ ಅವರು ನಮಗೆ ಏನೇನು ಹೇಳಿಕೊಟ್ಟಿದ್ದರೋ ಅದನ್ನು ನಾವು ಬಹಳ ಚೆನ್ನಾಗಿ ಕಲಿತ್ತಿದ್ದೇವೆ. ಸದನದ ಸದಸ್ಯನಾಗಿರುವಂಥವರು ಯಾವುದೇ ಒಂದು ವಿಚಾರವನ್ನು ಯಾರ ಮೇಲಾದರೂ ಒಂದು ಅಪಾದನೆಯನ್ನು ಮಾಡುವಂಥ ಸಂದರ್ಭ ಬಂದಾಗ ಅದಕ್ಕೆ ವಿಶೇಷವಾದ ಒಂದು ಕಾನೂನಿನ ಚೌಕಟ್ಟಿನೊಳಗೆ ಒಂದು notice ಅನ್ನು serve ಮಾಡಬೇಕು. ಅದಕ್ಕೆ ಸಂಬಂಧಪಟ್ಟ ರೀತಿಯಲ್ಲೆ ಉತ್ತರವನ್ನು ಕೊಡುವಂಥ ಅವಕಾಶವನ್ನು ಕೊಡಬೇಕೆನ್ನುವಂಥ ಎಲ್ಲಾ ವಿಚಾರಗಳನ್ನು ಹಿರಿಯ ಸದಸ್ಯನಾಗಿರುವಂಥ ಮಾನ್ಯ ಸಿದ್ದರಾಮಯ್ಯನವರು ಇಲ್ಲಿ ಕುಳಿತಾಗ ನಮಗೆಲ್ಲರಿಗೂ ಹೇಳಿಕೊಟ್ಟಿದ್ದಾರೆ. ಅದೇ ರೀತಿಯಾಗಿ ನನಗೆ ನಿನ್ನೆ ದಿವಸ Upper House duty ಇತ್ತು. ನಾನು ನಿನ್ನೆ Upper House ನಲ್ಲಿರುವಂಥ ಸಂದರ್ಭದಲ್ಲಿ ಇಲ್ಲಿ ವಿಶೇಷವಾಗಿ ಬರದ ಬಗ್ಗೆ ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ಜೆನರಿಕ್ ಔಷಧದ ಬಗ್ಗೆ ಇಲ್ಲಿ ಚರ್ಚೆಯಾಗಿರುವಂಥದ್ದನ್ನು ಬೆಳಿಗ್ಗೆ ಪತ್ರಿಕೆ ನೋಡಿದಾಗ ನನಗೆ ಆಶ್ಚರ್ಯವಾಯಿತು. ಇದರ ಜೊತೆಗೆ ಬಹಳಷ್ಟು ಮಾಧ್ಯಮಗಳಲ್ಲಿ ಮಾನ್ಯ ಸಿದ್ದರಾಮಯ್ಯನವರು ಹೇಳಿದ ರೀತಿಯಲ್ಲಿ ರಾಜಿನಾಮೆಯನ್ನು ಕೇಳುವಂಥದ್ದು ಕೂಡ ಇಲ್ಲಿ ಆಗಿದೆ. ಮೊದಲನೆಯದಾಗಿ, ನನಗೆ ಇಲ್ಲಿ ಈ ವಿಷಯವಾಗಿ clarification ಕೊಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ, ಬಹಳ ಮುಖ್ಯವಾಗಿ ದೇಶದಲ್ಲಿ ಮೊದಲ ಬಾರಿಗೆ ಜೆನರಿಕ್ ಡ್ರಗ್ ಹೌಸ್‌ಗಳನ್ನು ಪ್ರಾರಂಭ ಮಾಡುವಂಥ ಒಂದು ಪ್ರಕ್ರಿಯೆಯನ್ನು ಕರ್ನಾಟಕ ರಾಜ್ಯದಲ್ಲಿ ಮಾಡಿದ್ದಾರೆಂಬ ಮೆಚ್ಚುಗೆಯನ್ನು ಕೇಂದ್ರ ಸರ್ಕಾರದ ಸಚಿವರಾಗಿರುವಂಥ

ಮಾನ್ಯ ಗುಲಾಂ ನಬಿ ಆಜಾದ್‌ರವರು ಸರ್ಕಾರಕ್ಕೆ ಒಂದು ಪತ್ರವನ್ನು ಬರೆದು ಅಭಿನಂದನೆಗಳನ್ನು ಸಲ್ಲಿಸಿದರು. ನಾನೂ ಸಹ ಅವರಿಗೆ ಧನ್ಯವಾದಗಳನ್ನು ಹೇಳಿದೆ. ಇವತ್ತು ಇಂಥ ಒಂದು ಕಾರ್ಯವನ್ನು ಎಲ್ಲಾ ಕಡೆಗಳಲ್ಲೂ ಮಾಡಬೇಕೆನ್ನುವ ಬಗ್ಗೆ ಅವರ ಕಚೇರಿಯಲ್ಲೇ ಅವರ ಜೊತೆಯಲ್ಲಿ ನಡೆದಂಥ ಸಭೆಯಲ್ಲಿ ನಮಗೆ ಮಾರ್ಗದರ್ಶನವನ್ನು ಕೊಟ್ಟಿರೆನ್ನುವ ವಿಚಾರವನ್ನು ತಿಳಿಸಬಯಸುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಜೂನ್ 21ನೇ ತಾರೀಖಿನಂದು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ಒಂದು ಜೆನರಿಕ್ ಡ್ರಗ್ ಹೌಸ್ ಅನ್ನು ಪ್ರಾರಂಭ ಮಾಡಲಾಗಿದೆ. ಜನತಾ ಬಜಾರ್‌ನಲ್ಲಿ ಈ ಒಂದು ಜೆನರಿಕ್ ಡ್ರಗ್ ಹೌಸ್ ಅನ್ನು ಪ್ರಾರಂಭ ಮಾಡಿದ್ದಾರೆ. ಈ ಜೆನರಿಕ್ ಡ್ರಗ್ ಹೌಸ್ ಎಂದ ತಕ್ಷಣ ಬಹಳಷ್ಟು ವಿಚಾರಗಳನ್ನು ಮಾಧ್ಯಮಗಳಲ್ಲೂ ಬರೆದಿದೆ. ಯಾವ ಔಷಧವನ್ನು ಆಯಾಯಾ ಕಂಪನಿಗಳು ತಮ್ಮ branded ಹೆಸರಿನಲ್ಲಿ ಔಷಧವನ್ನು ಮಾರಾಟ ಮಾಡುತ್ತಾರೆ. ಅದಕ್ಕೆ ಹೊರತಾಗಿ ಇದನ್ನು ತಮ್ಮ ಬ್ರಾಂಡ್ ಇಲ್ಲದೇ ಆಯಾಯಾ ಕಂಪನಿಗಳು ನೇರವಾಗಿ ಜನಸಾಮಾನ್ಯರ ದೃಷ್ಟಿಯಿಂದ ಕೊಡುವಂಥ ಔಷಧಕ್ಕೆ ಪ್ರತ್ಯೇಕವಾದಂಥ ರೀತಿಯಲ್ಲಿ ಅದನ್ನು ಜೆನರಿಕ್ ಡ್ರಗ್ಸ್ ಆಗಿ ಕೊಡುವಂಥ ಪದ್ಧತಿಯನ್ನು ಎಲ್ಲಾ ಕಡೆಗಳಲ್ಲೂ ಇಟ್ಟು ಕೊಂಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಮೊದಲ ಬಾರಿಗೆ ಇಂಥ ಒಂದು ಪ್ರಯತ್ನವನ್ನು ನಾವು ಮಾಡಿದ್ದೇವೆ. ಮಾನ್ಯ ಸದಸ್ಯರು ಜೆನರಿಕ್ ಡ್ರಗ್ ಹೌಸ್‌ಗಳನ್ನು ಪ್ರಾರಂಭ ಮಾಡುವಂಥ ಸಂದರ್ಭದಲ್ಲಿ ಇತ್ತೀಚೆಗೆ ನಾನು ಜೆನರಿಕ್ ಮೆಡಿಸಿನ್ ಪರಿಶೀಲಿಸಲೆಂದು ಅದರ ಮಳಿಗೆಗೆ ತೆರಳಿ ಔಷಧವನ್ನು ಖರೀದಿಸಿದ್ದೇವೆ. ಆದರೆ ಅಲ್ಲಿ ಸಿಗುವ ಔಷಧಗಳು ಮಾರುಕಟ್ಟೆಯ ದರಕ್ಕಿಂತ ಹತ್ತು ಪಟ್ಟು ಹೆಚ್ಚಾಗಿದ್ದವೆಂಬ ಮಾತನ್ನು ಹೇಳಿದ್ದಾರೆ. ಅದರೆ ನಮ್ಮ ಜೆನರಿಕ್ ಡ್ರಗ್ ಹೌಸ್‌ನಲ್ಲಿ ಇವತ್ತು ಮಾರುಕಟ್ಟೆಯ ದರಕ್ಕಿಂತ ಶೇ. 50 ರಿಂದ ಶೇ. 80 ಕಡಿಮೆ ದರಕ್ಕೆ ಮಾರಾಟ ಮಾಡಿರುವುದರ ಬಗ್ಗೆ ತಮಗೆ ನಾನು ಎಲ್ಲಾ ದಾಖಲೆಗಳನ್ನು ಒದಗಿಸಿ ಕೊಡುತ್ತೇನೆ. ಇನ್ನೊಂದು ಮುಖ್ಯವಾದಂಥ ಅಂಶವನ್ನು ಇಲ್ಲಿ ಹೇಳಿದ್ದಾರೆ. ಆದು ಏನೆಂದರೆ Cetrizine ಎಂಬ ಗುಳಿಗೆ ಇಂಡಿ ತಾಲ್ಲೂಕಿನ ಔಷಧಾಲಯಗಳಲ್ಲಿ ಮತ್ತು

ನಮ್ಮ ಆಸ್ಪತ್ರೆಯಲ್ಲಿ ಕೇವಲ ರೂ. 2.30 ಪೈಸೆಗೆ ಸಿಕ್ಕರೆ, ಸರ್ಕಾರಿ ಆಸ್ಪತ್ರೆಯ ಜೆನರಿಕ್ ಮಳಿಗೆಯಲ್ಲಿ 25/– ರೂಪಾಯಿಗಳಿಗೆ ಮಾರಾಟವಾಗುತ್ತಿದೆ ಎಂಬುದನ್ನು ಹೇಳಿ, ಇಲ್ಲಿ ಒಂದು ಬಿಲ್ ಅನ್ನು ಅವರು ಕೊಟ್ಟಿದ್ದಾರೆ. ಮತ್ತೆ ಔಷಧವನ್ನು ತಮ್ಮ ಮುಂದೆ Exhibit ಮಾಡಿರುವುದನ್ನು ತಮ್ಮ ಮೂಲಕ ನಾನು ಇಲ್ಲಿ ತರಿಸಿಕೊಂಡಿದ್ದೇನೆ. ಅದರೆ ಮುಖ್ಯವಾಗಿ ನಾನು ಅವರನ್ನು ಕೇಳಬಯಸುವುದೇನೆಂದರೆ, ಅವರು ವಿಶೇಷವಾಗಿ ಡಾಕ್ಟರ್ ಆಗಿದ್ದು ನಾನು profession ನಲ್ಲಿ doctor ಅಲ್ಲ. ಅವರು DHO ಆಗಿದ್ದಂಥವರು, ಹಾಗಾಗಿ ಅವರಿಗೆ ಇದರ ಬಗ್ಗೆ ಅರಿವು ಇದೆಯೆಂದು ಅಂದುಕೊಂಡಿದ್ದೇನೆ. ನಾನು ಇಲ್ಲಿ ತಮ್ಮ ಮುಂದೆ ಎರಡು ವಿಚಾರಗಳನ್ನು ಇಡುತ್ತಿದ್ದೇವೆ. ಮೊದಲನೆಯದಾಗಿ, ಯಾವುದು branded drugs ಯಾವುದು ಜೆನರಿಕ್ ಡ್ರಗ್ಸ್ ಎಂಬ ಬಗ್ಗೆ, ತಮ್ಮ ಮುಂದೆ ಮೊನ್ನೆ ದಿವಸ ಜನತಾ ಬಜಾರ್‌ಗೆ ಸಂಬಂಧಪಟ್ಟ ಹಾಗೆ ಒಂದು ಡ್ರಗ್ ಬಿಲ್ ಅನ್ನು ಇಲ್ಲಿ produce ಮಾಡಿದ್ದಾರೆ. ಇದು ಜನತಾ ಬಜಾರ್ ಡ್ರಗ್ ಹೌಸ್, It is a Unit of KSCCF Limited ಎಂದು ಇದೆ. ಸಂಪೂರ್ಣವಾಗಿ 25 ವರ್ಷಗಳ ಹಿಂದೆ ಈ ಜನತಾ ಬಜಾರ್ ಅನ್ನು ಬೆಂಗಳೂರು ಮೆಡಿಕಲ್ ಕಾಲೇಜಿನ ಆವರಣದಲ್ಲಿ ಪ್ರಾರಂಭ ಮಾಡಿರುವಂಥದ್ದು ಆಗಿದೆ. ಈ ಬಿಲ್ ಅನ್ನು ಅಲ್ಲಿ ದಿನಾಂಕ 15–7–2012 ಕೊಟ್ಟಿರುವಂಥದ್ದು, ಮಾನ್ಯ ಸದಸ್ಯರನ್ನು ಯಾರೋ ತಪ್ಪು ದಾರಿಗೆ ತರುವಂಥ ಪ್ರಯತ್ನವನ್ನು ಮಾಡಿದ್ದಾರೆ. ಅವರಿಗೆ ಜೆನರಿಕ್ ಡ್ರಗ್ ಹೌಸ್ ಎಂದರೆ ಏನು, ಬ್ರಾಂಡೆಡ್ ಡ್ರಗ್ ಎಂದರೆ ಏನೆಂಬುದು ಗೊತ್ತಿದೆ. ಆದರೆ ಅವರು ಸ್ವತಃ ಹೇಳಿದ ಹಾಗೆ ಅವರೇ ಹೋಗಿದ್ದರೆ ನಿನ್ನೆ ದಿವಸ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಜನತಾ ಬಜಾರ್‌ನಲ್ಲಿ purchase ಮಾಡಿಕೊಂಡು ಬಂದಿದ್ದೇವೆಂದು ಯಾರೋ ಬಿಲ್ ಮತ್ತು ಔಷಧವನ್ನು ಇವರಿಗೆ ಕೊಡುವಂಥ ಕೆಲಸವನ್ನು ಮಾಡಿದ್ದಾರೆ. ಆದರೆ ಇದೇ ಔಷಧ ಅವರದೇ ಸ್ವಂತ ಆಸ್ಪತ್ರೆಯಲ್ಲಿ ರೂ. 2.30 ಪೈಸೆ ಮಾರಾಟ ಪಡುತ್ತಿರುವಂಥದ್ದು ನಾವು ನಮ್ಮ ಆಸ್ಪತ್ರೆಯಲ್ಲಿ cetrizine ಎಂಬ ಔಷಧಿಯನ್ನು ತಂದಿರುವುದಕ್ಕೆ ಜನತಾ ಬಜಾರ್ ಎಂದು ಇಂಗ್ಲೀಷ್‌ನಲ್ಲಿ ಪ್ರಿಂಟ್ ಆಗಿರುವಂಥ ಬಿಲ್‌ಗಳು ಇವೆ. ಜನತಾ ಬಜಾರ್, ಜೆನರಿಕ್

ಔಷಧದ ಮಳಿಗೆ ಎಂದು ಹೇಳಿ. ಕರ್ನಾಟಕ ರಾಜ್ಯ ಸರಕಾರಿ ಗ್ರಾಹಕ ಮಹಾಮಂಡಳದ ಒಂದು ಯುನಿಟ್ ಆಗಿದೆ ಎನ್ನುವುದಕ್ಕೆ ಇಲ್ಲಿ ಕೊಟ್ಟಿದ್ದೇವೆ. ಇವರು ಇಲ್ಲಿ ಹೇಳಿದ ರೀತಿಯಲ್ಲಿ 25/– ರೂ.ಗಳಿಗೆ ಮಾರಾಟ ಮಾಡಿದ್ದಾರೆಂಬ ರಸೀದಿಯನ್ನು produce ಮಾಡಿದ್ದಾರೆ. ಆದರೆ ಜೆನರಿಕ್ ಡ್ರಗ್ಸ್‌ನಲ್ಲಿ 21ನೇ ತಾರೀಖಿನಂದು ಮಾನ್ಯ ಮುಖ್ಯಮಂತ್ರಿಯವರು ಬಂದು ಉದ್ಘಾಟನೆ ಮಾಡಿದ ದಿವಸದಿಂದ ಹಿಡಿದು ಇಲ್ಲಿಯವರೆಗೂ ಆಗಿರುವಂಥ ಬಿಲ್‌ಗಳನ್ನು ಸಂಪೂರ್ಣವಾಗಿ ಇಲ್ಲಿ ತಮ್ಮ ಮುಂದೆ ಕೊಡುತ್ತಿದ್ದೇನೆ. ಇದರಲ್ಲಿ Cetrizine Tablet ಅನ್ನು ಇವರ Nursing Home ನಲ್ಲಿ ರೂ. 2.30 ಪೈಸೆಗೆ ಏನು ಮಾರಾಟ ಮಾಡಿದ್ದಾರೆ. ಅದನ್ನು ನಾವು ರೂ. 1.15 ಪೈಸೆಗೆ ಮಾರಾಟ ಮಾಡಿದ್ದೇವೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾನು ತಮ್ಮ ಮುಂದೆ ಕೊಡುತ್ತಿದ್ದೇನೆ. ಇದು ಒಂದು ಭಾಗವಾದರೆ, ನನಗೆ ಇನ್ನೂ ಒಂದು ಪ್ರಶ್ನೆಯಾಗಿರುವಂಥದ್ದು, ಏನೆಂದರೆ, Pantophazole ಎಂಬ ಹತ್ತು Tablets ರೂ. 7.50 ಪೈಸೆಗೆ ಸಿಗುತ್ತದೆ. ಇದು ಜೆನರಿಕ್ ಡ್ರಗ್ ಹೌಸ್‌ನಲ್ಲಿ 57/– ರೂ.ಗಳಿಗೆ ಮಾರಾಟ ಮಾಡಿದ್ದಾರೆಂಬ ವಿಚಾರವನ್ನು ಇವರು ಕೊಟ್ಟರು. ಇವರು ಈ ಒಂದು ಬಿಲ್‌ನಲ್ಲಿ ತೋರಿಸಿರುವಂಥದ್ದು ಸರಿ. ಇದು ಯಾವ ಜನತಾ ಬಜಾರ್ ಆಗಿದೆ. ಇದು ಜೆನರಿಕ್ ಡ್ರಗ್ ಆಗಿದೆಯಾ? ಎಂಬುದನ್ನು ನೋಡಬೇಕು. ನಾನು ಆಗಲೇ ಹೇಳಿದ ಹಾಗೆ ಜೆನರಿಕ್ ಡ್ರಗ್ಸ್‌ನಲ್ಲಿ ಈ ತಿಂಗಳು ಕೊಟ್ಟಿರುವಂಥ ಬಿಲ್, ನಿನ್ನೆ ಬಿಲ್ ಮತ್ತು ಇವತ್ತು ಕೊಟ್ಟಿರುವಂಥ ಬಿಲ್ ಎಲ್ಲವನ್ನು ನಾನು ಇಲ್ಲಿಗೆ ತಂದಿದ್ದೇವೆ. ಹತ್ತು tablet ಗೆ 57/– ರೂ.ಗಳನ್ನು ತೆಗೆದುಕೊಂಡಿದ್ದಾರೆಂದು ಏನು ಹೇಳಿದ್ದಾರೆ. ಇದನ್ನು ರೂ.10.98 ಪೈಸೆಗೆ ಕೊಡುವಂಥದ್ದನ್ನು ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟಂಥ ದಾಖಲೆಗಳನ್ನು ತಮಗೆ ಕಳುಹಿಸಿ ಕೊಡುತ್ತಿದ್ದೇವೆ. ಇನ್ನು ಮೂರನೆಯದಾಗಿ, ಇಲ್ಲಿ ಉಲ್ಲೇಖವಾಗಿರುವಂಥ ರೀತಿಯಲ್ಲಿ Ceftriazone ಎನ್ನುವಂಥ ಚುಚ್ಚು ಮದ್ದು ಮಾರುಕಟ್ಟೆಯಲ್ಲಿ 19/– ರೂ.ಗಳಿಗೆ ಲಭ್ಯವಾಗಿರುತ್ತದೆ. ಆದರೆ ಜೆನರಿಕ್ ಡ್ರಗ್ ಹೌಸ್‌ನಲ್ಲಿ ಇದನ್ನು 57/– ರೂ.ಗಳಿಗೆ ಮಾರಾಟ ಮಾಡುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಂಥ

ಬಿಲ್‌ಗಳನ್ನು ಅಂದಿನಿಂದ ಇಲ್ಲಿಯವರೆಗೆ ಇರುವುದನ್ನು ಇಟ್ಟಿದ್ದೇನೆ. ಆದರೆ ಇವರು ಈ ಜನತಾ ಬಜಾರ್‌ನಲ್ಲಿ ತಂದಿರುವಂಥದ್ದು ನಿಜ. ಅವರು ಹೇಳಿದಂಥ ರೀತಿಯಲ್ಲಿ 57/– ರೂ.ಗಳಿಗೆ ಮಾರಾಟ ಮಾಡಿದ್ದಾರೆ. ನಾವು ರೂ. 17.58 ಪೈಸೆಗಳಿಗೆ ಮಾರಾಟ ಮಾಡಿರುವಂಥ ಎಲ್ಲಾ ದಾಖಲೆಗಳನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ, ಇದು ಒಂದು ಭಾಗವಾಗಿದೆ. ಇಲ್ಲಿ ಬಹಳ ಮುಖ್ಯವಾಗಿರುವಂಥ ಒಂದು ಅಂಶ ನನ್ನ ಮುಂದೆ ಇರುವಂಥದ್ದು ಎಂದರೆ, ಇದನ್ನು ಬೇರೆ ಯಾರಾದರೂ ಹೇಳಿದ್ದರೆ ಹೌದೆಂದು ಯೋಚನೆ ಮಾಡುತ್ತಿದ್ದೆ. ಆದರೆ ಇವರು ಒಬ್ಬ ಡಾಕ್ಟರ್ ಆಗಿದ್ದು, DHO ಆಗಿದ್ದಂಥವರು. ಈ ಮಾತನ್ನು ಇಲ್ಲಿ ಹೇಳಬೇಕೆಂದರೆ ಇದರ ಹಿಂದೆ ಇರುವಂಥ ವಿಚಾರಗಳು ಏನು? ತಾವು ನಿಜವಾಗಿಯೂ ಕೂಡ ಅಲ್ಲಿಗೆ ಹೋಗಿದ್ದೆ ಆಗಿದ್ದರೆ. ಇದು regular ಜನತಾ ಬಜಾರ್‌ನಲ್ಲಿ branded drugs ಗೆ ಸಂಬಂಧಪಟ್ಟಂಥ ರಸೀತಿಗಳು ಮತ್ತು ಅದಕ್ಕೆ ಸಂಬಂಧಪಟ್ಟಂಥ ಔಷಧಗಳನ್ನು ಇಲ್ಲಿ ತಮ್ಮ ಮುಂದೆ ಕೊಟ್ಟಿದ್ದಾರೆ. ಇದೆಲ್ಲಾ branded drugs ಹಾಗೆ. ಜೆನರಿಕ್ ಡ್ರಗ್ಸ್ ದೇಶದಲ್ಲಿ ಮೊದಲನೇ ಬಾರಿಗೆ ಇದೇ ಔಷಧಗಳನ್ನು ಯಾವುದೇ ಬ್ರಾಂಡ್ ಇಲ್ಲದೇ ಇರುವ ರೀತಿಯಲ್ಲಿ ಕೊಟ್ಟಿರುವಂಥದ್ದು, MRP ಇದೆ. ನಾವು MRP ಯಲ್ಲಿ ಶೇ. 50 ಭಾಗದಿಂದ 80 ಭಾಗ ಕೊಡುತ್ತಿದ್ದೇವೆ. ನಾವು ಎಲ್ಲಾ ಬಿಲ್ಲುಗಳಲ್ಲಿಯೂ ಎಷ್ಟು ಹಣ save ಆಗಿದೆ ಎನ್ನುವುದನ್ನು ನೇರವಾಗಿ ಹೇಳಿದ್ದೇವೆ. ಉದಾಹರಣೆಗೆ, ಇದು ನಿನ್ನೆ ಕೊಟ್ಟಿರುವಂಥ ಒಂದು ಬಿಲ್. ಇದರಲ್ಲಿ 94 ರೂಪಾಯಿಗಳಿಗೆ ಮೆಡಿಸಿನ್ ತೆಗೆದುಕೊಂಡಿದ್ದಾರೆ. ಅದರಲ್ಲಿ ಅವರಿಗೆ save ಆಗಿರುವುದು 600 ರೂಪಾಯಿ. ಅಂದರೆ ಆ ಮೆಡಿಸಿನ್‌ಗಳ ಒಟ್ಟು ಬೆಲೆ 694 ರೂಪಾಯಿ 34 ಪೈಸೆಯಾಗಿತ್ತು. ಅದರೆ ನಾವು collect ಮಾಡಿರುವುದು 94 ರೂಪಾಯಿ. 600 ರೂಪಾಯಿ save ಆಗಿದೆ ಎನ್ನುವುದನ್ನು ಕೂಡ ಇದರಲ್ಲಿ ಹಾಕಿದ್ದೇವೆ. ಪ್ರತಿಯೊಂದನ್ನು ಸರ್ಕಾರ ಆಡಿಟ್ ಮಾಡುವಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಏಕೆ ಇದೆಲ್ಲ ನಡೆಯುತ್ತಿದೆ ಎನ್ನುವ ಪ್ರಶ್ನೆಯನ್ನು ಕೇಳಬಹುದು. ನಾನು ಏಕೆ ಸಿದ್ದರಾಮಯ್ಯನವರ ಹೆಸರನ್ನು ತೆಗೆದುಕೊಂಡು ಹೇಳಿದೆ ಎಂದರೆ ಅವರು

ಯಾರ ಕಡೆಯಲ್ಲೇ ಇರಲಿ, ಏನಾದರೂ ಒಳ್ಳೆಯ ಕೆಲಸವನ್ನು ಮಾಡಿದಂಥ ಸಮಯದಲ್ಲಿ irrespective of the party, ಅವರು ಅದನ್ನು ಹೊಗಳುವಂಥಾದ್ದನ್ನು ನಾನು ಕಂಡಿದ್ದೇನೆ. 21ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಬೇಕಾಗಿತ್ತು. 24x7 ಎನ್ನುವ ಒಂದು ಟಿ.ವಿ. ಚಾನೆಲ್‌ನವರು 20ನೇ ತಾರೀಖು ಒಂದು ವಿಷಯವನ್ನು telecast ಮಾಡುತ್ತಾರೆ. ಏನೆಂದರೆ, ಹುಬ್ಬಳ್ಳಿಯಲ್ಲಿ ಜೆನರಿಕ್ ಡ್ರಗ್ ಹೌಸನ್ನು ಮಂತ್ರಿಗಳು ತಮಗೆ ಬೇಕಾಗಿರುವ ಮಾಫಿಯಾದವರಿಗೆ ಕೊಟ್ಟಿದ್ದಾರೆ ಎಂದು ಇನ್ನೂ ಉದ್ಘಾಟನೆಯಾಗಿರುವುದಿಲ್ಲ. 21ನೇ ತಾರೀಖು ಉದ್ಘಾಟನೆಯಾಗಬೇಕಾಗಿರುತ್ತದೆ. ಅಗ ಆಲ್ಲಿಯ ಮುಖ್ಯಸ್ಥರಿಗೆ ನಾನು ಫೋನ್ ಮಾಡಿ. ಇದರ ಹಿಂದುಗಡೆ ಏನಿದೆ ಎಂದು ನಾನು ಕೇಳುತ್ತೇನೆ. ನಂತರ ಅವರಿಗೆ ಆಶ್ಚರ್ಯವಾಗುತ್ತದೆ. ಏಕೆಂದರೆ ಹುಬ್ಬಳ್ಳಿ ಮತ್ತು ಬೆಂಗಳೂರು ಈ ಎರಡು ಕಡೆಗಳಲ್ಲಿ ಯಾರು ಔಷಧದ ಜಾಲವನ್ನು ಇಟ್ಟುಕೊಂಡಿದ್ದಾರೆ. ಆ ವ್ಯಕ್ತಿಗಳು ಜೆನರಿಕ್ ಡ್ರಗ್ ಹೌಸ್ ಉದ್ಘಾಟನೆಗೆ ಮುಖ್ಯಮಂತ್ರಿಗಳು ಹೋಗಬಾರದು ಎಂದು ಈ ರೀತಿ ಕೊಡುತ್ತಾರೆ. ಕೇಂದ್ರದ ಗುಲಾಂ ನಬಿ ಆಜಾದ್‌ರವರು ಅದನ್ನು ಇಂಗ್ಲೀಷ್ ಚಾನೆಲ್‌ನಲ್ಲಿ ನೋಡಿ ನನಗೆ ಒಂದು ಮಾತನ್ನು ಬೆನ್ನುತಟ್ಟಿ ಹೇಳಿದರು. ಯಾವುದೇ ವಿರೋಧ ಬಂದರೂ ಪರವಾಗಿಲ್ಲ. ನಾನು ಮುಂದಿನ ಬಜೆಟ್‌ನಲ್ಲಿ 4,500 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇಡೀ ದೇಶಕ್ಕೇ ಇದನ್ನು ಕೊಡುತ್ತೇವೆ. ಈಗ ಕರ್ನಾಟಕ ಮೊದಲನೆಯದಾಗಲಿ ಎಂದು ಹೇಳಿ, ಮುಂದಿನ ತಿಂಗಳ 12ನೇ ತಾರೀಖು ಬೆಂಗಳೂರಿಗೆ ಬಂದು ಅವರೇ ಒಂದು ಜೆನರಿಕ್ ಡ್ರಗ್ ಹೌಸನ್ನು ಉದ್ಘಾಟನೆ ಮಾಡುತ್ತಿದ್ದಾರೆ. ಇಲ್ಲಿ ಏಕೆ ಹೀಗಾಗಿದೆ? ಇದರ ಹಿಂದುಗಡೆ ಇರುವಂಥ ವಿಚಾರಗಳೇನು? ನಾನು ನಿಮ್ಮ ಮುಂದೆ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಆ ದಿವಸ ಸರ್ಕಾರ ಒಂದು ಪ್ರಕಟಣೆಯನ್ನು ಕೊಟ್ಟಿದೆ. ಒಟ್ಟು 397 ಔಷಧಗಳ ಮಾರುಕಟ್ಟೆ ಬೆಲೆ ಎಷ್ಟು MRP ಎಷ್ಟು. ನಾವು ಯಾವ ರೇಟಿಗೆ ಮಾಡುತ್ತಿದ್ದೇವೆ ಎನ್ನುವುದೆಲ್ಲವನ್ನೂ ಅದರಲ್ಲಿ ಹೇಳಿದ್ದೇವೆ. ದೇಶದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ನಮ್ಮ ಸರ್ಕಾರ 397 ಔಷಧಿಗಳಿಗೆ ಶೇಕಡ 70 ರಷ್ಟು ಕಡಿಮೆ ಬೆಲೆಗೆ ಜನತಾ

ಬಜಾರ್‌ಗಳ ಮೂಲಕ ಮಾಡುವಂಥ ವ್ಯವಸ್ಥೆಯನ್ನು ಮಾಡಿದೆ. ಬಹಳ ಮುಖ್ಯವಾಗಿ ಈ ಬಿಲ್‌ಗಳನ್ನು ತಂದುಕೊಟ್ಟವರು ಯಾರು? ಈ ಬಿಲ್‌ಗಳಿಗೆ ಸಂಬಂಧಪಟ್ಟ ಹಾಗೆ ಇನ್ನೊಂದು ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. 10ನೇ ತಾರೀಖು, The Hindu ಪತ್ರಿಕೆಯಲ್ಲಿ ಒಂದು ವರದಿಯಾಯಿತು. ಇದರಲ್ಲಿ ಎಲ್ಲಾ ವಿಚಾರಗಳನ್ನು ಹೇಳಿ, ನಂತರ ಹೇಳುತ್ತಾರೆ. "although not all will accept the generic drugs, there is a threat to the livelihood of nearly two lakh stalls and forty thousand pharmacies in the State". ಕರ್ನಾಟಕ ರಾಜ್ಯ ಸರ್ಕಾರ ಎಲ್ಲಾ ಆಸ್ಪತ್ರೆಗಳಲ್ಲಿ ರಾಜ್ಯಾದ್ಯಂತ ಜೆನರಿಕ್ ಡ್ರಗ್ಸ್‌ಅನ್ನು ಮಾರುವುದೇ ಆದರೆ, ಜೆನರಿಕ್ ಡ್ರಗ್ಸ್ ಅನ್ನು ಸರ್ಕಾರ ಕೊಂಡುಕೊಳ್ಳುವ ವ್ಯವಸ್ಥೆಯಾದರೆ, ಈ ರಾಜ್ಯದಲ್ಲಿರುವ 40 ಸಾವಿರ ಡೀಲರ್‌ಗಳಿಗೆ ತೊಂದರೆಯಾಗುತ್ತದೆ. ಆದಕ್ಕೆ ನಾವು ವಿರೋಧವನ್ನು ಮಾಡುತ್ತೇವೆ ಎಂದು ಆದರ ರಾಜ್ಯದ ಅಧ್ಯಕ್ಷರು ಒಂದು ಪ್ರಕಟಣೆಯನ್ನು ಕೊಡುತ್ತಾರೆ. In spite of these things ಪಾರದರ್ಶಕತೆಯ ಆಧಾರದ ಮೇಲೆಯೇ ಹೆಜ್ಜೆಯನ್ನು ಇಡುವಂಥ ಕೆಲಸವನ್ನು ನಾವು ಮಾಡಿದ್ದೇವೆ. ನಾನು ಆಗಲೇ ಹೇಳಿದ ಹಾಗೆ, ಸದನವನ್ನು ತಪ್ಪು ದಾರಿಗೆ ಎಳೆಯುವಂಥ ಪ್ರಯತ್ನ ಇಲ್ಲಿ ಆಯಿತು. ಆ ಬಿಲ್‌ಗಳನ್ನು ನೋಡಿದ ತಕ್ಷಣವೇ, ಹೌದಲ್ಲವೇ, ಜನತಾ ಬಜಾರ್ ಕೌಂಟರ್ ಎಂದು ಇದೆ ಎಂದು ಅನಿಸುತ್ತದೆ. 25 ವರ್ಷಗಳಿಂದ ಜನತಾ ಬಜಾರ್ ಕೌಂಟರ್ ಇದೆ. ಇದು ಬ್ರಾಂಡೆಡ್ ಡ್ರಗ್ಸ್ ಅನ್ನು ಕೊಡುವಂಥಾದ್ದು, ಇದು ಜೆನರಿಕ್ ಡ್ರಗ್ಸ್‌ಅನ್ನು ಕೊಡುವಂಥ ಸರ್ಕಾರದ ಒಂದು ಬಿಲ್, ಇದು ಕನ್ನಡದಲ್ಲಿದೆ, ಅದು ಇಂಗ್ಲೀಷಿನಲ್ಲಿದೆ. ಅದು ಬ್ಲೂ ಕಲರ್‌ನಲ್ಲಿದೆ. ಇದು ಗ್ರೀನ್ ಕಲರ್‌ನಲ್ಲಿದೆ. ಇದರ ಕೆಳಗಡೆ ಯಾರ್ಯಾರು ಎಷ್ಟೆಷ್ಟು save ಮಾಡಿಕೊಂಡಿದ್ದಾರೆ ಎನ್ನುವ ಪ್ರತಿಯೊಂದನ್ನು ಇದರಲ್ಲಿ ಹಾಕಿದ್ದೇವೆ. ರಾಜ್ಯಾದ್ಯಂತ 20 ಕೇಂದ್ರಗಳಲ್ಲಿ ಇದನ್ನು ಪ್ರಾರಂಭ ಮಾಡಬೇಕು ಎಂದು ಹೊರಟಾಗಲೇ ಇವೆಲ್ಲ ನಮ್ಮ ಮುಂದೆ ಬರುವಂಥದ್ದು ಆಗಿದೆ. ಇನ್ನು ಕ್ವಾಲಿಟಿಯ ಬಗ್ಗೆ ಒಂದು ಪ್ರಶ್ನೆ ನಮ್ಮ ಮುಂದೆ ಬರುತ್ತಿದೆ. 694 ರೂಪಾಯಿಗಳಿರುವುದನ್ನು 600 ರೂಪಾಯಿ

save ಮಾಡಿ 94 ರೂಪಾಯಿಗಳಿಗೆ ಕೊಡುವುದಕ್ಕೆ ಆಗುತ್ತದೆಯೇ? ಹಾಗಿದ್ದರೆ ಇದರ ಕ್ವಾಲಿಟಿ ಹೇಗಿದೆ ? ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ನಾನು ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತೇನೆ, ಏಕೆಂದರೆ, ಜೆನರಿಕ್ ಡ್ರಗ್ಸ್ ಅನ್ನು ಮಾರುವಂಥವರಿಗೆ stockist ಗೆ ಕೊಡುವಂಥ commission, dealers ಗೆ ಕೊಡುವಂಥ commission, retailer ಗೆ commission ಕೊಡುವಂಥ ಇದರ ಜೊತೆಯಲ್ಲಿ central excise ನ exemption ಇವೆಲ್ಲವೂ ಸೇರಿ ಬರುವಂಥ ಹಣವನ್ನು ನೇರವಾಗಿ consumer ಗೆ ಜನತಾ ಬಜಾರ್‌ಗಳ ಮೂಲಕ ಕೊಡಬೇಕೆಂದು ಹೇಳಿ ಸರ್ಕಾರ MOUಗೆ sign ಮಾಡಿದೆ. ಇಷ್ಟು ಮಾತ್ರವಲ್ಲ. ಯಾವುದೇ ಕಾರಣಕ್ಕೂ quality ಯಲ್ಲಿ compromise ಆಗಬಾರದೆಂದು ಹೇಳಿ ನಾವು ಈಗಾಗಲೇ order issue ಮಾಡಿದ್ದೇವೆ. ಅದರ ಪ್ರಕಾರ Food and Drugs Act, America, ಇಲ್ಲಿ ಅಪ್ರೂವ್ ಆಗಿರುವಂಥ 10 ಕಂಪನಿಗಳು ವಿಶ್ವದಲ್ಲಿದೆ. ಅದರಲ್ಲಿ 4 ಕಂಪನಿಗಳು ಭಾರತ ದೇಶದಲ್ಲಿದೆ. ನಮ್ಮ ದೇಶದಲ್ಲಿರುವ Cipla Limited, Torrent Pharmaceuticals Limited, Sun Pharma Limited and Intas Pharmaceuticals Limited ಈ ನಾಲ್ಕು ಕಂಪನಿಗಳ ಜೊತೆಯಲ್ಲಿ ನಾವು ಒಂದು MOU ಗೆ sign ಮಾಡಿದ್ದೇವೆ. ಅವರು ಅವರ Factory unit ನಲ್ಲಿ ಎಷ್ಟಿದೆಯೋ ಅದನ್ನು ನೇರವಾಗಿ ಸರ್ಕಾರಕ್ಕೆ ಕೊಡುವಂಥ ವ್ಯವಸ್ಥೆಗಳನ್ನು ಮಾಡಿದ್ದಾರೆ. ಇದಕ್ಕೋಸ್ಕರವಾಗಿ ಇಷ್ಟು ಕಡಿಮೆ ಬೆಲೆಯಲ್ಲಿ ನಾವು ಕೊಡಲು ಸಾಧ್ಯವಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಹೀಗೆ ಎಲ್ಲೂ quality compromise ಆಗದ ರೀತಿಯಲ್ಲಿ ಒಂದು ರೀತಿಯಲ್ಲಿ ಒಂದು ಹೆಜ್ಜೆಯನ್ನು ಇಡುವಂಥ ಕೆಲಸವನ್ನು ನಾವು ಮಾಡಿದ್ದೇವೆ. Branded drugs ಎಂದರೆ ಯಾವುದು, generic drugs ಎಂದರೆ ಯಾವುದು ಎಂದು ನಮ್ಮ ಡಾಕ್ಟರ್‌ರವರಿಗೆ ಗೊತ್ತು. Bangalore Medical Collegeಗೆ ಹೋದಾಗ ಅಲ್ಲಿ branded drugs medical store ಯಾವುದು generic drugs store ಯಾವುದು ಎನ್ನುವುದು ಅವರಿಗೆ ಗೊತ್ತು. ಆದರೆ ಆವರಿಗೆ ಬಿಲ್‌ಗಳನ್ನು ತಂದು ಕೊಟ್ಟಿದ್ದಾರಲ್ಲಾ. ದೊಡ್ಡ

ಲಾಬಿಯನ್ನು ಮಾಡುವಂಥ ವ್ಯವಸ್ಥೆಯನ್ನು ಮಾಡುವಂಥವರು ಅವರಿಗೆ mislead ಮಾಡುವಂಥ ಕೆಲಸವಾಗಿದೆ ಎಂದು ನಾನು ಅಂದುಕೊಳ್ಳುತ್ತಿದ್ದೇನೆ. ಈ ದೃಷ್ಟಿಯಲ್ಲಿ ಡ್ರಗ್ಸ್ ಮಾಫಿಯಾ ಹೇಗಿರುತ್ತದೆ.ಎನ್ನುವುದಕ್ಕೆ 22ನೇ ತಾರೀಖಿನ ಪತ್ರಿಕೆಗಳನ್ನು ನೋಡಿದರೆ, ಅದು ಇವತ್ತು ಸತ್ಯ ಏನಿಸುತ್ತದೆ. ಆ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ, ಇವತ್ತು ನಾವು ಇದನ್ನು ಪ್ರಾರಂಭ ಮಾಡುತ್ತಿದ್ದೇವೆ. ಇನ್ನು ಎರಡು ತಿಂಗಳೊಳಗಾಗಿ ಡ್ರಗ್ ಮಾಫಿಯಾ ನಮ್ಮ ವಿರುದ್ಧವಾಗಿ ಏನೇನನ್ನು ಮಾಡಲಿಕ್ಕೆ ಸಾಧ್ಯವಿದೆಯೋ ಅವುಗಳನ್ನು ಮಾಡಲು ಪ್ರಾರಂಭ ಮಾಡುತ್ತಾರೆ ಎನ್ನುವ ಮುನ್ಸೂಚನೆಯನ್ನು ನಾವು ಕಳೆದ ತಿಂಗಳು 21ನೇ ತಾರೀಖು inauguration timeನಲ್ಲಿ ಹೇಳಿದ್ದೆವು. ವಿಶೇಷವಾಗಿ, ಸಮಾಜದ ವ್ಯವಸ್ಥೆಯಲ್ಲಿ ತನ್ನನ್ನೇ ತೊಡಗಿಸಿಕೊಂಡಿರುವಂಥ ಅಮೀರ್ ಖಾನ್‌ರವರು ನಿನ್ನೆ ಬೆಳಿಗ್ಗೆ ದೂರವಾಣಿ ಮೂಲಕವಾಗಿ ಮಾತನಾಡಿ. appreciation ಹೇಳಿ, ಇದೇ ತಿಂಗಳು 29ನೇ ತಾರೀಖು ನಾನು inauguration ಗೆ ಬರುತ್ತೇನೆ ಎನ್ನುವ ಮಾತನ್ನು ಹೇಳಿದರು. ಆನಂತರದಲ್ಲಿ ನಾನು ಜಿನೀವಾಗೆ shooting ಗೆ ಹೋಗುತ್ತಿದ್ದೇನೆ. ವಾಪಸ್ಸು ಬಂದ ನಂತರ ನವೆಂಬರ್ ತಿಂಗಳಲ್ಲಿ ಕರ್ನಾಟಕದ ಜೆನರಿಕ್ ಡ್ರಗ್ ಹೌಸ್ ಬಗ್ಗೆ study ಮಾಡುವುದಕ್ಕೆ ಬೆಂಗಳೂರಿಗೆ ಬರುತ್ತೇನೆ ಎಂದು ನನಗೆ ನಿನ್ನೆ ಸಾಯಂಕಾಲ ದೂರವಾಣಿ ಮೂಲಕವಾಗಿ ತಿಳಿಸಿದರು. ಇಡೀ ರಾಜ್ಯದಲ್ಲಿ ಇಡೀ ದೇಶದಲ್ಲಿ ಇಂಥ ಭಾವನೆ ಬಂದಿರುವ ಈ ಸಂದರ್ಭದಲ್ಲಿ ಡ್ರಗ್ ಮಾಫಿಯಾ ಹೀಗೆ ಮಾಡುತ್ತಿದ್ದಾರೆ. ನಾನು ಹೇಳುವಂಥ ಎಲ್ಲ ಅಂಶಗಳು ಸತ್ಯವೆನ್ನುವುದಕ್ಕೆ ನಾನು ನಿಮ್ಮ ಮುಂದೆ ಇವೆಲ್ಲವನ್ನು produce ಮಾಡುತ್ತೇನೆ. ಇನ್ನೊಂದು ಬಹಳ ದುಃಖಕರವಾದಂಥ ಸಂಗತಿಯೆಂದರೆ, ಮಾನ್ಯ ಸಿದ್ದರಾಮಯ್ಯನವರು ಬಹಳ ನೊಂದ ಮನಸ್ಸಿನಿಂದ ಹೇಳಿದರು. ನಾನು ಒಂದು ವಿಷಯವನ್ನು ಇಲ್ಲಿ ಓದಿದೆ. ಏನೆಂದರೆ, ಸಚಿವ ರಾಮದಾಸ್ ಅವರ ಇಲಾಖೆಗೆ ಮಧ್ಯೆ ಪ್ರವೇಶಿಸಿ ಜೆನರಿಕ್ ಡ್ರಗ್ಸ್‌ನ ಜನ್ಮ ಜಾಲಾಡಿದರು. ಆಷ್ಟೇ ಅಲ್ಲದೆ, ಇಂಥ ಅನ್ಯಾಯ ನಡೆಸುತ್ತಿರುವ ಹಿನ್ನೆಲೆಯಲ್ಲಿ ಸಚಿವ ರಾಮದಾಸ್ ರಾಜಿನಾಮೆ ನೀಡಬೇಕು. ಅದಲ್ಲದೇ,

ಇದಕ್ಕೆ permission ಕೊಟ್ಟಂಥ ಇಲಾಖೆಯ ಹಿಂದಿನ ಕಾರ್ಯದರ್ಶಿಯಾಗಿದ್ದ ಗೋಪಾಲಕೃಷ್ಣ ಗೌಡರನ್ನು ಪರಪ್ಪನ ಅಗ್ರಹಾರದ ಜೈಲಿಗೆ ಕಳುಹಿಸಿಕೊಡಬೇಕು ಎಂದು ಬರೆದಿದ್ದಾರೆ. ಎಲ್ಲಾ ಹಿರಿಯರ ಸಮ್ಮುಖದಲ್ಲಿ ಹೇಳುತ್ತಿದ್ದೇನೆ, ನಾನೇನಾದರೂ ಇದರಲ್ಲಿ 10% excess ಅಲ್ಲ ಶೇಕಡ 50 ಕ್ಕಿಂತಲೂ ಕಡಿಮೆ ದರದಲ್ಲಿ ಕೊಟ್ಟಿದ್ದಾರೆ ಎಂದರೆ, ಇದರಲ್ಲಿ ಯಾವುದೇ ಅನ್ಯಾಯಗಳು ಆಗಿಲ್ಲವೆಂದು ನೀವು ಹೇಳಿದ್ದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ, ಇದರಲ್ಲಿ ಯಾವುದಾದರೂ ಅನ್ಯಾಯವಾಗಿದೆ ಎನ್ನುವುದಾದರೆ ನಾನು ರಾಜಿನಾಮೆ ಕೊಡಲಿಕ್ಕೆ ಸಿದ್ಧನಾಗಿದ್ದೇನೆ. ಇದನ್ನು ಮಾಡಿದ ನಮ್ಮ ಕಾರ್ಯದರ್ಶಿಯವರು ರಿಟೈರ್ ಆಗಿದ್ದಾರೆ. ಬಹಳ ಒಳ್ಳೆಯ ಅಧಿಕಾರಿಯೆಂದು ಹೆಸರು ಪಡೆದಂಥ ಅವರು ಇದಕ್ಕೆ permission ಕೊಟ್ಟರಲ್ಲ. ಅವರನ್ನು ಕೂಡ ಎಲ್ಲಿಗೆ ಕಳುಹಿಸಬೇಕು ಎಂದು ಹೇಳಿದರೋ ಅಲ್ಲಿಗೆ ಕಳುಹಿಸಲು ನನ್ನದ್ಯಾವುದೇ ಅಭ್ಯಂತರವಿಲ್ಲ. ಆದರೆ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ಬಡವರ ದೃಷ್ಟಿಯಿಂದ ಈ ಮಾಫಿಯಾದ ಮಧ್ಯದಲ್ಲೂ ನಾವು ಧೈರ್ಯವಾಗಿ ಒಂದು ಹೆಜ್ಜೆಯನ್ನು ಇಟ್ಟಿದ್ದೇವೆ. ಇವತ್ತು ನಾನು ಸಿದ್ದರಾಮಯ್ಯನವರಿಗೆ ಅಭಿನಂದನೆಯನ್ನು ಹೇಳಲು ಬಯಸುತ್ತೇನೆ. Nursing and Para-Medical ಗೆ ಸಂಬಂಧಪಟ್ಟ ಹಾಗೆ ಗುಲ್ಬರ್ಗ ಮತ್ತು ಬೀದರ್‌ನಲ್ಲಿ ಒಂದು ಸಮಸ್ಯೆಯಾಗಿತ್ತು. ಅವರು ನನ್ನ ಮುಂದೆ ಆ ವಿಚಾರವನ್ನು ಹೇಳಿದರು. ಆಗ ನಾನು ಅಲ್ಲಿಗೆ examination centre ಕೊಡುವುದಿಲ್ಲ ಎಂದು ಅವರಿಗೆ ಹೇಳಿದೆ. ಇಂಥ ಅನ್ಯಾಯಗಳಾಗಿದೆ ಎನ್ನುವುದಾದರೆ ನೀವು ಕ್ರಮವನ್ನು ಮುಂದುವರಿಸಿ ಎಂದು ಅವರು ಹೇಳಿದರು. ಈ ರೀತಿಯಾಗಿ ಎಲ್ಲರ ಸಹಕಾರವನ್ನು ತೆಗೆದುಕೊಂಡು ಹೆಜ್ಜೆಯನ್ನು ಇಡುವಂಥ ಸಂದರ್ಭದಲ್ಲಿ ಈ ರೀತಿಯಾದಂಥ ವಿಚಾರಗಳನ್ನು ಸದನದಲ್ಲಿ ಹೇಳಿದರೆ. ಎಲ್ಲೋ ಒಂದು ಕಡೆ ನಮಗೆ ಮಾನಸಿಕವಾಗಿ ನೋವಾಗಿದೆ. ನಾನು ಯಾರ ಬಗ್ಗೆಯೂ ಅಪಾದನೆ ಮಾಡಲು ಬಯಸುವುದಿಲ್ಲ. ನಮಗೆ ಗೊತ್ತಿದೆ. ಡಾಕ್ಟರ್‌ರವರು ತಾವೇ ನೇರವಾಗಿ ಜನತಾ ಬಜಾರ್‌ಗೆ ಹೋಗಿರಲಿಲ್ಲ. ಯಾರೋ ತಂದುಕೊಟ್ಟಿದ್ದನ್ನು ಇಲ್ಲಿ ಹೇಳಿದ್ದಾರೆ. ತಮಗೆ ಎಲ್ಲ ದಾಖಲೆಗಳನ್ನು

ಕಳುಹಿಸಿಕೊಡುತ್ತೇನೆ. ಇದರಲ್ಲಿ ಎಲ್ಲಾದರೂ ಕಳೆದ ತಿಂಗಳಿಂದ ಇಲ್ಲಿಯವರೆಗೆ ನಾವು MRP ಗಿಂತ 10% ಬೆಲೆ ಜಾಸ್ತಿ ತೆಗೆದುಕೊಂಡಿದ್ದಾರೆ. ಆ ರೀತಿಯ ಅನ್ಯಾಯಾವಾಗಿದ್ದರೆ ಇದಕ್ಕೆ ಸಂಬಂಧಪಟ್ಟ ಹಾಗೆ ಕ್ರಮವನ್ನು ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಇಲ್ಲವೆಂದರೆ ಈ ಸದನದ ಮೂಲಕವಾಗಿ, ಹೌದು ತಪ್ಪಾಗಿತ್ತು ಎನ್ನುವ ಸಂದೇಶವನ್ನು ಆ ಕಡೆಯಿಂದಲೂ ಕಳುಹಿಸುವಂಥ ಕೆಲಸವನ್ನು ನೀವು ಮಾಡಬೇಕು ಎಂದು ನಾನು ಕೋರುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರ ಬಗ್ಗೆ ಮಾನ್ಯ ಬಗಲಿಯವರು ಏನು ಹೇಳಿದ್ದರು. ಅದಕ್ಕೆ ಅವರ ನಿರೀಕ್ಷೆಯಂತೆ ಅವರ ಉತ್ತರವನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ನಿಯಮಾವಳಿಗಳ ಪ್ರಕಾರ ಮಾನ್ಯ ಸಚಿವರು ನಿನ್ನೆ ಸದನದಲ್ಲಿರಲಿಲ್ಲ. ನಿನ್ನೆ ಬರಗಾಲದ ವಿಷಯವಾಗಿ ಚರ್ಚೆಯಾಯಿತು. ಬರಗಾಲದ ವಿಷಯವಾಗಿ ಚರ್ಚೆಯಾಗುವಾಗ ಮಾನ್ಯ ಸಚಿವರಿಗೆ ನೋಟೀಸ್ ಕೊಡದೆ, ಸಚಿವರ ಹಾಜರಾತಿಯೂ ಇಲ್ಲದೆ ಅವರ ಮೇಲೆ ಸಾಕಷ್ಟು ಅಪಾದನೆಯನ್ನು ಮಾಡಿದ ಬಗ್ಗೆ ಸಚಿವರು ಸದನಕ್ಕೆ ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ. ಇವೆಲ್ಲ ನಿನ್ನೆ ಸದನದ ಕಡತಕ್ಕೆ ಹೋಗಿದೆ. ದಯವಿಟ್ಟು ಅದನ್ನು ಕಡತದಿಂದ ತೆಗೆಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ನಾನು ಪರಿಶೀಲಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಇನ್ನು ಮುಂದೆಯೂ ಈ ರೀತಿಯಾಗಬಾರದು. ಸಚಿವರು ಇಲ್ಲದೆ, ಸಚಿವರಿಗೆ ನೋಟೀಸ್ ಕೊಡದೆ ಅವರ ಮೇಲೆ ಏನು ಬೇಕಾದರೂ ಮಾತನಾಡುವುದಾದರೆ ಕಷ್ಟ. ಮಾನ್ಯ ಸಚಿವರು ಇವತ್ತು ಮನನೊಂದು ಮಾತನಾಡಿದ್ದಾರೆ. ಈ ರೀತಿಯಾಗಿದೆ ಎನ್ನುವುದಕ್ಕೆ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಇನ್ನು ಮುಂದೆ ಈ ರೀತಿಯಾಗದಂತೆ ನಿಯಮವನ್ನು ನಾವು ಪಾಲಿಸಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಇದರಲ್ಲಿ clarification ಗೆ ಅವಕಾಶವಿಲ್ಲ.

ಡಾ॥ ಬಗಲಿ ಸಾರ್ವಭೌಮ ಸಾತಗೌಡ : ಮಾನ್ಯ ಅಧ್ಯಕ್ಷರೆ, ನಾನು clarification ಕೇಳುತ್ತಿದ್ದೇನೆ.

ಅಧ್ಯಕ್ಷರು : ಹೇಳಿ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಬಹಳ ವಿನಯದಿಂದ ಒಂದು ಮಾತು ಹೇಳುತ್ತೇನೆ. ಮಾನ್ಯ ಸದಸ್ಯರು ನಿನ್ನೆ ಸಾಕಷ್ಟು ಮಾಹಿತಿಗಳನ್ನು ಕೊಟ್ಟರು. ಸಚಿವರು ಇವತ್ತು ಅದಕ್ಕೆ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆಕಸ್ಮಾತ್ ಇದರ ಮೇಲೆ ಕೂಡ ಅವರದೇನಾದರೂ ಬೇರೆ ವಿಚಾರವಿದ್ದರೆ, Let him bring through some different motion or different form. Clarification ಚರ್ಚೆ ದಯವಿಟ್ಟು ಬೇಡವೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನಿನ್ನೆ ಬಗಲಿಯವರು ಮಾಡಿದ ಆರೋಪವನ್ನು ನಾನು ಕೂಡ ಕೇಳಿದೆ. ಮಂತ್ರಿಯವರ ಉತ್ತರವನ್ನು ಕೂಡ ನಾನು ಕೇಳಿದ್ದೇನೆ. ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ generic medicine and branded medicine ಅಂದರೇನೆಂಬುದು ಬಹಳಷ್ಟು ಜನರಿಗೆ ಗೊತ್ತಿಲ್ಲ. ನಾನು ಯಾರನ್ನು ಹೊಗಳಬೇಕು ಅಥವಾ ತೆಗಳಬೇಕೆಂಬ ಪ್ರಶ್ನೆ ಇಲ್ಲ. ವಾಸ್ತವ ಸಂಗತಿ ಬಗ್ಗೆ ನಾನು ಹೇಳುವುದಕ್ಕೆ ಹೊರಟಿದ್ದೇನೆ. Generic medicine is a base chemical. ನೇರವಾಗಿ ಕಡಿಮೆ ಬೆಲೆಯಲ್ಲಿ ಸಿಗತಕ್ಕಂಥ ಒಂದು ವ್ಯವಸ್ಥೆ. Branded ಎಂದರೆ ಒಂದೊಂದು ಕಂಪನಿಯವರು ಅವರಿಗೆ ಬೇಕಾದಷ್ಟು rate ಹಾಕಿಕೊಂಡು ಮಾರುತ್ತಾರೆ. ಅಂದರೆ 1:10, 1:20 ರಂತೆ ಅವರವರ brand ಮೇಲೆ rate ಹಾಕಿ ಮಾರುತ್ತಾರೆ. ಇದರ ವಿಚಾರ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಚರ್ಚೆಗೆ ಬಂತು. ಈ ವಿಷಯ ಎರಡು ವರ್ಷಗಳ ಹಿಂದೆ ಚರ್ಚೆಗೆ ಬಂದಾಗ ವ್ಯಾಪಕವಾಗಿ ಚರ್ಚೆ ಮಾಡಿ ಕೇಂದ್ರ ಸರ್ಕಾರಕ್ಕೆ Public Accounts Committee ಯಿಂದ ನಾವೆಲ್ಲ ಹೋಗಿ ಮಾನ್ಯ ಗುಲಾಂ ನಬಿ ಆಜಾದ್‌ರವರನ್ನು ಭೇಟಿಯಾಗಿ ನಾವು ಈ ರೀತಿಯಾಗಿ

generic medicine ಗೆ ಹೆಚ್ಚು ಒತ್ತು ಕೊಡಬೇಕೆನ್ನುವ ವಾದವನ್ನು ಅವರ ಮುಂದಿಟ್ಟಾಗ, ಅವರು ಅದನ್ನು ಅರ್ಥ ಮಾಡಿಕೊಂಡು ಅದನ್ನು ಒಪ್ಪಿಕೊಂಡರು. ನಮಗೆ ಸಂತೋಷವನ್ನು ವ್ಯಕ್ತಪಡಿಸಿದರು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು generic medicine ಬಗ್ಗೆ ದೆಹಲಿವರೆಗೆ ಬಂದಿರುವಂಥದ್ದು ಬಹಳ ಸಂತೋಷದ ಸಂಗತಿ, ಇದನ್ನು ಹೆಚ್ಚು ಪ್ರಚಾರಕ್ಕೆ ತರುವಂಥ ಕೆಲಸವನ್ನು ಮಾಡುತ್ತೇನೆ ಎನ್ನುವ ಮಾತನ್ನೂ ಸಹ ಹೇಳಿದರು. ಅದು ಆದಮೇಲೆ, ಸಿನಿಮಾ ನಟರಾದ ಅಮೀರ್ ಖಾನ್‌ರವರೂ ಸಹ ಅದಕ್ಕೆ ಚಾಲನೆ ಕೊಡುವುದಕ್ಕೆ ಹೊರಟಿದ್ದಾರೆ. ನಾನು ನನ್ನ ಶಿರಾ ಕ್ಷೇತ್ರದಲ್ಲಿ promise ಮಾಡಿ Generic medicine ನ ಒಂದು stall ಅನ್ನು ಸಹ ಇನ್ನು ಒಂದು ವಾರದಲ್ಲಿ ಮಾಡಿಸುತ್ತೇನೆಂದು ಹೇಳಿ ಬಂದಿದ್ದೇನೆ. ಇದರಲ್ಲಿ ಡಾ॥ ಬಗಲಿಯವರು ಯಾವುದಕ್ಕೋಸ್ಕರ ಆರೋಪ ಮಾಡಿದ್ದಾರೆನ್ನುವುದು ಬೇರೆ ವಿಚಾರ. ಮಾನ್ಯ ಅಧ್ಯಕ್ಷರಾದ ತಮಗೆ ಕಡತವನ್ನು ಕಳುಹಿಸುತ್ತಾರೆ, ತರಿಸಿ ನೋಡಿ. ಇಲ್ಲವೆಂದರೆ, ಇದರಲ್ಲಿ ವಾಸ್ತವಿಕವಾಗಿ ಏನಾದರೂ ಇದೆಯೋ, ಇಲ್ಲವೋ ಎನ್ನುವುದನ್ನು ನೀವು ಸಮಿತಿಗೆ ಬೇಕಾದರೆ refer ಮಾಡಿ, ಅದನ್ನು verify ಮಾಡಿಸುವುದಕ್ಕೆ ಅವಕಾಶವಿದೆ. ಅದನ್ನು ಮಾಡಬಹುದು. ನಾನು ಈ ವಿಚಾರಕ್ಕೆ ಪ್ರಸ್ತಾಪ ಮಾಡುತ್ತಿಲ್ಲ. ಆದರೆ, ಕೇಂದ್ರ ಸರ್ಕಾರದ ತೀರ್ಮಾನ ಇವತ್ತು generic medicine ಅನ್ನು ನೇರವಾಗಿ ಜನರಿಗೆ ತಲುಪಿಸಬೇಕೆನ್ನುವ ಚಿಂತನೆಯ ಹಿನ್ನಲೆಯಲ್ಲಿ ಆ ಕಾರ್ಯಕ್ರಮಕ್ಕೆ ಧಕ್ಕೆ ಆಗುವುದು ಬೇಡ. ಚರ್ಚೆಯಾಗುತ್ತದೆ, ವಿಧಾನಸಭೆಯಲ್ಲಿ ಆರೋಪ ಬರುತ್ತದೆ. ಆರೋಪ ಬಂದಾಗ ರಾಜೀನಾಮೆ ಕೇಳುತ್ತಾರೆ. ಇಂಥದ್ದೆಲ್ಲ ಆಗುತ್ತದೆ. ಆದರೆ, ವಾಸ್ತವಿಕ ಸಂಗತಿ ಏನು ಎನ್ನುವುದನ್ನು ಅರಿಯುವ ಕೆಲಸವನ್ನು speaker ರವರ ಹಂತದಲ್ಲಿ ಮಾಡುವುದು ಬಿಡುವುದು ತಮ್ಮ ವಿವೇಚನೆಗೆ ಬಿಟ್ಟಿದ್ದು. ನೀವಾದರೂ ಮಾಡಿ ಅಥವಾ verify ಮಾಡುವುದಕ್ಕೆ ಸಮಿತಿಗಾದರೂ ಕಳುಹಿಸಿಕೊಡಿ. ಆದರೆ, ಅಂತಿಮವಾಗಿ generic medicine ನ ಬಗ್ಗೆ ಹೆಚ್ಚು ಪ್ರಚಾರವಾಗಬೇಕು, ರಾಜ್ಯದ ಜನರಿಗೆ ಗೊತ್ತಾಗಬೇಕು. patients ಗೂ ಗೊತ್ತಾಗಬೇಕು. ಈ Chemical branded ನವರು ಇದ್ದರಲ್ಲಾ ಅವರು

ಮಾಡುತ್ತಿರುವ ದಂಧೆ ಬಗ್ಗೆ ಹೇಳುವುದಾದರೆ, ನಾವು ಬೇಕಾದರೆ ತಮ್ಮ ಅಧೀನದಲ್ಲಿಯೇ ಕೆಲಸ ಮಾಡುತ್ತೇನೆ. ನಮ್ಮ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಏನೆಲ್ಲಾ ಬಂದಿದೆ ಎಂದರೆ, ಲೋಕಾಯುಕ್ತಕ್ಕೆ ಕೊಟ್ಟರುವ ವರದಿಯಲ್ಲಿ ಎಷ್ಟಿದೆ ಎಂದರೆ, ಸುಮಾರು 50 ಟನ್‌ಗಳಾಗುವಷ್ಟು ಅರ್ಜಿಗಳು ಬಂದಿವೆ. ನಾವು ನಮ್ಮ ಸಮಿತಿಯಲ್ಲಿ ಅದರ ವಿಚಾರ ಪ್ರಸ್ತಾಪ ಮಾಡಿದ ತಕ್ಷಣವೇ ಅಷ್ಟೊಂದು ಅರ್ಜಿಗಳು ಬಂದಿವೆ. ಇಷ್ಟರಮಟ್ಟಿಗೆ ಅದರ ದಂಧೆ ಇದೆ. ಆ ದಂಧೆಗೆ ನಾವು, ಸರ್ಕಾರ ಯಾವತ್ತು ಕೂಡ ಮಾರು ಹೋಗುವಂಥದ್ದಲ್ಲ. ಜನಸಾಮಾನ್ಯರಿಗೆ ಇವತ್ತು ಕಡಿಮೆ ಬೆಲೆಗೆ ನೇರವಾಗಿ ಔಷಧಿ ಸಿಗುವ ವ್ಯವಸ್ಥೆಯಾಗಬೇಕು. ಆ ಜವಾಬ್ದಾರಿ ನಿಮ್ಮ ಮೇಲಿದೆ. ಇವರ ಮಧ್ಯದಲ್ಲಿ ಆಗಿರುವಂಥ ವ್ಯತ್ಯಾಸ ಏನು ಎನ್ನುವುದನ್ನು ನೀವು ಅವರನ್ನು ಕರೆಸಿ ಇಬ್ಬರ ಜೊತೆಯಲ್ಲಿ ಚರ್ಚೆ ಮಾಡಿ ಅವಶ್ಯಕತೆ ಇದ್ದರೆ Floor Leaders ಅನ್ನು ಕರೆದು ಚರ್ಚೆ ಮಾಡುವಂಥದ್ದನ್ನು ಮಾಡಿ. ಆದರೆ, generic medicine ಬಗ್ಗೆ ಕೆಟ್ಟ ಅಭಿಪ್ರಾಯ ಮೂಡುವ ರೀತಿಯಲ್ಲಿ ಆಗುವಂಥದ್ದು ಬೇಡ ಎನ್ನವುದು ನನ್ನ ಅಭಿಪ್ರಾಯ.

ಡಾ॥ ಬಗಲಿ ಸಾರ್ವಭೌಮ ಸಾತಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಉತ್ತರವನ್ನು ನೀಡಿದ್ದಾರೆ. ಈ KCCF ನಿಂದ ಯಾವ ಔಷಧಗಳು ಸರಬರಾಜು ಆಗುತ್ತದೆ ಎನ್ನುವ ಬಗ್ಗೆ ನಾನು ಒಂದು ಮಾಹಿತಿಯನ್ನು ಪಡೆದಿದ್ದೇನೆ. KCCF ನವರು ಯಾವ್ಯಾವ ಮಾತ್ರೆಗಳನ್ನು, ಯಾವ್ಯಾವ injection ಗಳನ್ನು ಯಾವ್ಯಾವ ಬೆಲೆಯಲ್ಲಿ ಸರಬರಾಜು ಮಾಡುತ್ತಿದ್ದಾರೆನ್ನುವ ಬಗ್ಗೆ ನನ್ನ ಹತ್ತಿರ ಕಾಪಿ ಇದೆ.

Mr. Speaker : There are two medicines.

ಡಾ॥ ಬಗಲಿ ಸಾರ್ವಭೌಮ ಸಾತಗೌಡ : These are spurious drugs.

ಅಧ್ಯಕ್ಷರು : ನೀವು ಹಾಗೆ ಹೇಳುವುದಕ್ಕೆ ಬರುವುದಿಲ್ಲ. ನೋಡಿ, ಜನತಾ ಬಜಾರ್ ನವರ medical shop ಬಹಳ ವರ್ಷಗಳಿಂದ ಇದೆ. It is only about generic medicine and branded medicine. ಅದನ್ನು ಹೇಳಿ. ನೀವು ಅದನ್ನು ಬಿಟ್ಟು ಯಾವುದೋ supply

ಮಾಡುತ್ತಾರೆ. ಅವರದು ಬೇರೆ supply ಎಂದು ಹೇಳುತ್ತೀರಿ. They supply all the medicines. No, you must limit

ಡಾ॥ ಬಗಲಿ ಸಾರ್ವಭೌಮ ಸಾತಗೌಡ : These are the generic medicines given by KCCF.

Mr. Speaker : KCCF are authorized dealers. Everybody knows it.

ಡಾ॥ ಬಗಲಿ ಸಾರ್ವಭೌಮ ಸಾತಗೌಡ : KCCF ನಲ್ಲೂ ಮಾರಾಟ ಮಾಡುತ್ತಾರೆ.

ಅಧ್ಯಕ್ಷರು : ಈಗ ಮಾನ್ಯ ಜಯಚಂದ್ರರವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಬಿಟ್ಟು ಆಚೆಗೆ ಹೋಗಬೇಡಿ. ಈಗ ಎಲ್ಲರಿಗೂ ಗೊತ್ತಿದೆ. ಜನತಾ ಬಜಾರ್ ಎಲ್ಲಾ ತರಹದ medical shops ಅವರದೇ ಅದಂಥದ್ದು ಇದೆ. ಯಾವ್ಯಾವ medicines ಮಾರುತ್ತಾರೆಂದು ಕೇಳಿದರೆ. they are selling both, Generic Mediciens ಇತ್ತೀಚೆಗೆ ಆದಕ್ಕಿಂತ ಮೊದಲು they were selling branded medicine. ನೀವು ಅದನ್ನು ಎತ್ತಿಕೊಂಡು ಈ rate ಗೆ ಕೊಟ್ಟರು ಎಂದರೆ, how it is possible ? No.

ಡಾ॥ ಬಗಲಿ ಸಾರ್ವಭೌಮ ಸಾತಗೌಡ : ನಾನು ಮಾತನಾಡುತ್ತಿರುವುದು generic medicine, ಬಗ್ಗೆ ಸರ್.

ಅಧ್ಯಕ್ಷರು : ಅದನ್ನು ಹೇಳಿ, ನಾನು ತರಿಸಿ ನೋಡುತ್ತೇನೆ. ಪುನಃ ಇದನ್ನು ಚರ್ಚೆ ಮಾಡುವ ಆಗತ್ಯವಿಲ್ಲ. ನಾನು ಎರಡನ್ನೂ compare ಮಾಡಿ ತೀರ್ಮಾನ ಕೊಡುತ್ತೇನೆ. ನಿಮ್ಮ documents ಅನ್ನು ನೀವು ಕೊಟ್ಟಿದ್ದೀರಿ. ನಾನು ಮಾನ್ಯ ಸಚಿವರಿಂದಲೂ ಸಂಬಂಧಪಟ್ಟ documents ಅನ್ನು ತೆಗೆದುಕೊಳ್ಳುತ್ತೇನೆ. Then I will take a decision.

ಶ್ರೀ ಟಿ.ಬಿ. ಜಯಚಂದ್ರ : ತಾವು ಕರೆದರೆ ಇದರ ಬಗ್ಗೆ ಕುಳಿತು ಚರ್ಚೆ ಮಾಡಬಹುದು. ಯಾರ ಬಗ್ಗೆಯೂ ಯಾರೊ ಆರೋಪ ಮಾಡುವುದು ಬೇಡ.

ಅಧ್ಯಕ್ಷರು : ಕರೆಯುತ್ತೇನೆ. Yes.

ಶ್ರೀ ಎಸ್.ಎ. ರಾಮದಾಸ್ : ಎಲ್ಲಾ ಔಷಧಗಳನ್ನು ಮತ್ತು ಬಿಲ್‌ಗಳನ್ನು ಅವರು ಕೊಟ್ಟಿರುವಂಥ ಬಿಲ್ ಮತ್ತು ನಮ್ಮ ಔಷಧಗಳಿಗೆ ಅವರು ಕೊಟ್ಟಂಥ ಬಿಲ್‌ಗಳು ಎಲ್ಲವನ್ನೂ ತಮಗೆ ಕಳುಹಿಸಿಕೊಡುತ್ತಿದ್ದೇನೆ. ಇಂದೇ ಇದರ ಬಗ್ಗೆ ಬೇಕಾದರೆ ತನಿಖೆಯಾಗಲಿ.

ಅಧ್ಯಕ್ಷರು : ಎರಡನ್ನೂ compare ಮಾಡಿ, I will call the Drug Controller also. I will take a decision ಸಾಕು, ಇದನ್ನು ಮುಕ್ತಾಯ ಮಾಡೋಣ. ಎರಡೂ ಕಡೆಯವರನ್ನು ಕರೆಸಿ ಮಾತನಾಡೋಣ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

1. ವಿಷಯ : ದೂಧ್‌ಗಂಗಾ ಮತ್ತು ಕೃಷ್ಣ ನದಿಯಿಂದ ಮರಳು ತೆಗೆಯುತ್ತಾರೆಂದು ಚಿಕ್ಕೋಡಿ ತಹಶೀಲ್ದಾರ್‌ರವರು ಪ್ರತಿಯೊಂದು ಬೋಟ್ ಮೇಲೆ 2 ಲಕ್ಷ ರೂಪಾಯಿ ದಂಡವನ್ನು ವಿಧಿಸಿರುವ ಕುರಿತು.

ಶ್ರೀ ಹುಕ್ಕೇರಿ ಪ್ರಕಾಶ ಬಾಬಣ್ಣ (ಚಿಕ್ಕೋಡಿ – ಸದಲಗ) : ಮಾನ್ಯ ಅಧ್ಯಕ್ಷರೆ, ದೂಧ್‌ಗಂಗಾ ಮತ್ತು ಕೃಷ್ಣ ನದಿಯಿಂದ ಮರಳು ತೆಗೆಯುತ್ತಾರೆಂದು ಚಿಕ್ಕೋಡಿ ತಹಶೀಲ್ದಾರ್‌ರವರು ಪ್ರತಿಯೊಂದು ಬೋಟ್ ಮೇಲೆ 2 ಲಕ್ಷ ರೂಪಾಯಿ ದಂಡವನ್ನು ವಿಧಿಸಿದ್ದಾರೆ. ಅದರ ಬಗ್ಗೆ ಶೂನ್ಯವೇಳೆಯಲ್ಲಿ ನಾನು ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸಳೆಯುತ್ತಾ ಅದಕ್ಕೆ ಅವರು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ತಾವು ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಇದು ಇವತ್ತು ನನಗೆ ಸಿಕ್ಕಿದೆ. ಇದಕ್ಕೆ ನಾಳೆ ಉತ್ತರ ತರಿಸಿ ತಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ನಾಳೆ ಉತ್ತರ ಕೊಡುತ್ತಾರಂತೆ, ಈಗ ಹೊಳೆಯಲ್ಲಿ ನೀರಿದೆ. 2–2 ಲಕ್ಷ ರೂಪಾಯಿ ಫೈನ್ ಹಾಕುತ್ತಾರೆಂದು ಹೇಳುತ್ತಾರೆ. ಈಗ ಎಲ್ಲಿ ಬೋಟ್‌ನಲ್ಲಿ ತೆಗೆಯಲ್ಲಿಕ್ಕಾಗುತ್ತದೆ? ಅವರಿಗೆ detail ಆಗಿ ಉತ್ತರ ಕೊಟ್ಟುಬಿಡಿ.